**PW-1** CMC 194/2023

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**CMC 194/2023**

ಪಿ.ಡಬ್ಲ್ಯೂ:01 ಶ್ರೀಮತಿ ಜಯಶ್ರೀ

**ಸಾಕ್ಷಿಯನ್ನು ದಿನಾಂಕಃ 18-07-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು ಃ ಎದುರುದಾರರ ಪರ ಶ್ರೀ.ಎ ಎಂ ಆರ್ ವಕೀಲರಿಂದ**

**1.** ನನಗೂ ಮತ್ತು ಎದುರುದಾರರಿಗೂ ದಿಃ14.05.2020 ರಂದು ಮದುವೆ ಆದ ಸಮಯದಲ್ಲಿ ದೇಶಾದ್ಯಂತ ಕೊರೋನಾ ಸಾಂಕ್ರಾಮಿಕ ರೋಗ ಇತ್ತು ಎಂದರೆ ಹೌದು. ಆದ ಕಾರಣ ನನ್ನ ಮತ್ತು ಎದುರುದಾರರ ಮದುವೆಯು ಸಾದಾರಣವಾಗಿ ಆಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಮದುವೆಗೆ ಸಂಬಂದಿಸಿದಂತೆ ಆಭರಣಗಳನ್ನು ಖರೀದಿ ಮಾಡಲು ಬಟ್ಟೆಗಳನ್ನು ಖರೀದಿ ಮಾಡಲು ಹೊರಗಡೆ ಹೋಗುವ ಅವಕಾಶ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಯವರು ಮೊದಲೇ ಅವುಗಳನ್ನು ಖರೀದಿ ಮಾಡಿ ಇಟ್ಟಿದ್ದರು ಎನ್ನುತ್ತಾರೆ. ನನ್ನ ಮದುವೆ ಸಮಯದಲ್ಲಿ ಎದುರುದಾರರು ಮಾಂಗಲ್ಯದ ಚೈನ್ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಮಾಂಗಲ್ಯ ಚೈನು ಈಗಲೂ ಸಹ ನನ್ನ ಬಳಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಗಲಾಟೆ ಸಮಯದಲ್ಲಿ ಎದುರುದಾರರು ಅದನ್ನು ಕಿತ್ತುಕೊಂಡಿರುತ್ತಾರೆ ಎನ್ನುತ್ತಾರೆ. ಎದುರುದಾರರು 10 ನೇ ತರಗತಿಯಲ್ಲಿ ಫೇಲ್ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**2.** ನನ್ನ ಮತ್ತು ಎದುರುದಾರರ ಮದುವೆಯು ಕೊರೋನಾ ಸಮಯದಲ್ಲಿ ಆದ ಕಾರಣ ಅವರು ಮನೆಯಲ್ಲಿ ಇದ್ದರು ಎಂದರೆ ಸರಿ. ಸದರಿ ಕೊರೋನಾ 2 ವರ್ಷಗಳ ಕಾಲ ಇದ್ದ ಕಾರಣ ಎದುರುದಾರರಿಗೆ ಯಾವುದೇ ಕೆಲಸಕ್ಕೆ ಹೋಗಲು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನನಗೆ 9 ತಿಂಗಳು ಗರ್ಬಿಣಿ ಮಾಸ ಇರುವಾಗ ನನ್ನ ತಾಯಿಯವರ ಮನೆಗೆ ಹೋಗಿರುತ್ತೇನೆ. ನಾನು 2 ನೇ ಅರ್ಜಿದಾರರು 9 ತಿಂಗಳು ಇರುವಾಗ ಎದುರುದಾರರ ಮನೆಗೆ ಕಾರ್ಯಕ್ರಮಕ್ಕೆ ಹೋಗಿದ್ದು ನಂತರ ಇಲ್ಲಿಯವರೆಗೂ ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ನಾನು 13.03.2022 ರಂದು ಎದುರುದಾರರ ಮನೆಗೆ ಹೋಗಿ ಅಲ್ಲಿ 3 ದಿನ ಇದ್ದು ನಂತರ ನನ್ನ ತಾಯಿ ಮನೆಗೆ ಬಂದಿರುತ್ತೇನೆ ಎಂದರೆ ಸರಿ.

**3.** ಎದುರುದಾರರು 2 ನೇ ಅರ್ಜಿದಾರರ 1 ನೇ ಹುಟ್ಟುಹಬ್ಬಕ್ಕೆ ನನ್ನ ತವರು ಮನೆಗೆ ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾವೆಲ್ಲರೂ ಸೇರಿ ಎದುರುದಾರರನ್ನು ಹೀಯಾಳಿಸಿ ಅವಮಾನಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ಎದುರುದಾರರು ಇದರಿಂದ ಬೇಸತ್ತು ವಿಷವನ್ನು ಕುಡಿದು ಕೋಲಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪೋಲೀಸರು ಅಲ್ಲಿಗೆ ಬಂದು ವಿಚಾರಣೆ ಮಾಡಿ ನಂತರ ನನ್ನನ್ನು ಕರೆದು ನಿರ್ದೇಶನಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ವಿರುದ್ದ ಕಾಮಸಮುದ್ರ ಪೋಲೀಸ್ ಠಾಣೆಯಲ್ಲಿ ಹೆಂಡತಿ ಮತ್ತು ಮಗು ಬೇಕು ಎಂದು ಹೇಳಿ ದೂರು ನೀಡಿರುತ್ತಾರೆ ಎಂದರೆನನಗೆ ಗೊತ್ತಿಲ್ಲ. ನಾನು ನಂತರ ಎದುರುದಾರರ ವಿರುದ್ದ ಕ್ಯಾಸಂಬಹಳ್ಳಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿ. ನಂತರ ಕ್ಯಾಸಂಬಹಳ್ಳಿ ಪೋಲೀಸರು ನಾನು ಮತ್ತು ಎದುರುದಾರರು ವಾಸ ಮಾಡುವ ಸ್ಥಳವು ಕಾಮಸಮುದ್ರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಿ ಸದರಿ ದೂರನ್ನು ಅಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ನಂತರ ಕಾಮಸಮುದ್ರ ಪೋಲೀಸರು ನನ್ನನ್ನು ಮತ್ತು ಎದುರುದಾರರನ್ನು ಕರೆದು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಪೋಲೀಸರ ಮುಂದೆ ಎದುರುದಾರರ ಜೊತೆ ಹೋಗುವುದಿಲ್ಲ ಎಂದು

ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ ಎನ್ನುತ್ತಾರೆ.

**4.** ನಾನು ಇಲ್ಲಿಯವರೆಗೂ ಎದುರುದಾರರು ನನ್ನನ್ನು ಕರೆದುಕೊಂಡು ಹೋಗಬೇಕು ಎಂದು ಹೇಳಿ ಬೇರೆ ಯಾವುದೇ ಅರ್ಜಿಯನ್ನು ಹಾಕಿರುವುದಿಲ್ಲ ಎಂದರೆ ಸರಿ. ದಿಃ**08.11.2022** ರಂದು ಎದುರುದಾರರು ತನ್ನ ವಕೀಲರ ಮೂಲಕ ನನಗೆ ಒಂದು ನೋಟೀಸು ನೀಡಿದ್ದರೂ ಎಂದರೆ ಸಾಕ್ಷಿಯು ತುಂಬಾ ನೋಟೀಸು ಎದುರುದಾರರು ಕಳುಹಿಸಿದ್ದು ನೆನಪಿಲ್ಲ ಎನ್ನುತ್ತಾರೆ. ನಂತರ ಎದುರುದಾರರು ಬಂಗಾರಪೇಟೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಂ ಸಿ **114/2023** ರಂತೆ ದಿಃ**12.07.2023** ರಂದು ಒಂದು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಹೌದು. ಸದರಿ ಎಂ ಸಿ **114/2023** ರ ನೋಟೀಸು ನನಗೆ ಜಾರಿ ಆದ ನಂತರ ನಾನು ದಿಃ**28.07.2023** ರಂದು ಈ ಪ್ರಕರಣವನ್ನು ಜೀವನಾಂಶಕ್ಕಾಗಿ ಹಾಕಿರುತ್ತೇನೆ ಎಂದರೆ ಸಾಕ್ಷಿಯು ಮೊದಲು ನಾನು ಮಾಲೂರಿನಲ್ಲಿ ಪ್ರಕರಣ ದಾಖಲಿಸಲು ಹೋಗಿರುತ್ತೇನೆ ಎನ್ನುತ್ತಾರೆ.

**5.** ಸದರಿ ಎಂ ಸಿ **114/2023** ರಲ್ಲಿ ನಾನು ಎದುರುದಾರರ ಜೊತೆ ಹೋಗಿ ಬಾಳಬೇಕು ಎಂದು ಹೇಳಿ ನ್ಯಾಯಾಲಯದ ಆದೇಶ ನೀಡಿದೆ ಎಂದರೆ ನನಗೆ ಗೊತ್ತಿಲ್ಲ. ಅದರ ನಂತರ ಎದುರುದಾರರು ನ್ಯಾಯಾಲಯದ ಆದೇಶದಂತೆ ಅವರ ಜೊತೆ ಬಂದು ಬಾಳಬೇಕು ಎಂದು ವಕೀಲರ ಮೂಲಕ ನೋಟೀಸು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರ ಕುಟುಂಬವು ವ್ಯವಸಾಯ ಅವಲಂಬಿತ ಕುಟುಂಬ ಎಂದರೆ ಹೌದು. ಸಾಕ್ಷಿ ಮುಂದುವರೆದು ಎದುರುದಾರರು ಕೆಲಸಕ್ಕೆ ಹೋಗುತ್ತಾರೆ ಮತ್ತು ಮಾವನವರು ಬಡ್ಡಿಗೆ ಹಣವನ್ನು ಬೇರೆಯವರಿಗೆ ಕೊಡುತ್ತಾರೆ ಎನ್ನುತ್ತಾರೆ. ನನಗೆ ನನ್ನ ಮಾವನಾದ ಕೃಷ್ಣರೆಡ್ಡಿರವರ ಒಡ ಹುಟ್ಟಿದವರ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ನನ್ನ ಮಾವನಿಗೆ ಆನಂದರೆಡ್ಡಿ ಮತ್ತು ಗೋವಿಂದರೆಡ್ಡಿ ಎಂಬ ಸಹೋದರರು ಇದ್ದಾರೆ ಎಂದರೆ ಸರಿ. ಸದರಿ ನನ್ನ ಮಾವನವರ ತಂದೆಯ ಹೆಸರು ಗುರುವಾರೆಡ್ಡಿ ಎಂದರೆ ನನಗೆ ಗೊತ್ತಿಲ್ಲ.

**6.** ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಪಹಣಿಗಳಾದ ನಿಪಿ **13** ರಿಂದ **18** ದಾಖಲೆಗಳನ್ನು ನಾನೇ ಹೋಗಿ ಪಡೆದಿರುತ್ತೇನೆ. ಸದರಿ ಪಹಣಿಗಳಲ್ಲಿ ಎದುರುದಾರರ ಹೆಸರಾಗಲೀ, ಅವರ ತಂದೆಯವರ ಹೆಸರಾಗಲೀ ಸದರಿ ನನ್ನ ಮಾವನವರ ಸಹೋದರರ ಹೆಸರಾಗಲೀ ಹಾಗೂ ನನ್ನ ಮಾವನವರ ತಂದೆಯವರ ಹೆಸರಾಗಲೀ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ**13** ರಿಂದ **18** ದಾಖಲೆಗಳಿಗೂ ಎದುರುದಾರರಿಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹ ಅವುಗಳನ್ನು ತಂದು ಈ ಅರ್ಜಿಯಲ್ಲಿ ಹಾಕಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ಎದುರುದಾರರು ಮೊದಲು ಆ ಆಸ್ತಿಗಳ ಬಗ್ಗೆ ಹೇಳಿದ್ದು ಅದರ ದಾಖಲೆಗಳನ್ನು ತಂದು ಹಾಕಿರುತ್ತೇನೆ ಎನ್ನುತ್ತಾರೆ. ನಿಪಿ.**19** ದಾಖಲೆಯನ್ನು ನಾನು ಈ ಅರ್ಜಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಜೀವನ್ ಸರ್ವಿಸ್ ಕಂಪನಿಯಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ. ಸದರಿ ಎದುರುದಾರರ ಕೆಲಸಕ್ಕೆ ಸಂಬಂದ ಪಟ್ಟಂತೆ ನಿಪಿ**19** ನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

**7.** ಎದುರುದಾರರಿಗೂ ನನಗೂ ಯಾವುದೇ ಬಿನ್ನಾಭಿಪ್ರಾಯ ಇರುವುದಿಲ್ಲ ಮತ್ತು ಎದುರುದಾರರು ನನ್ನನ್ನು ಈಗಲೂ ಅವರ ಜೊತೆ ಕರೆದುಕೊಂಡು ಹೋಗಲು ಸಿದ್ದರಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಎದುರುದಾರರ ಮೇಲೆ ನಂಬಿಕೆ ಇಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಅರ್ಜಿಯಲ್ಲಿ ಹೇಳಿದಂತೆ ಎದುರುದಾರರಿಗೆ ಯಾವುದೇ ಸಂಪಾದನೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದ್ವಿತೀಯ ಪಿಯುಸಿ ವ್ಯಾಸಾಂಗ ಮಾಡಿರುತ್ತೇನೆ. ನಾನು ಯಾವುದೇ ಕೆಲಸಕ್ಕೆ ಹೋಗುವುದಿಲ್ಲ. ಎದುರುದಾರರ ಕುಟುಂಬವು ಸಣ್ಣ

ಕುಟುಂಬವಾಗಿದ್ದು ವ್ಯವಸಾಯವನ್ನು ಅವಲಂಬಿಸಿದ್ದು ನಾನೇ ಅದು ಇಷ್ಟವಾಗದೇ ಆ ಕುಟುಂಬವನ್ನು ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ವರದಕ್ಷಿಣೆಗಾಗಿ ಅವರು ತೊಂದರೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ನಾನು ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ಎದುರುದಾರರಿಗೆ ನಾನು ಹೇಳಿದಂತೆ ಯಾವುದೇ ಸಂಪಾದನೆ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**